**ಸಾಕ್ಷಿಯನ್ನು ದಿನಾಂಕಃ 22.08.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ರಿಂದ 3, 10 ರಿಂದ 13 ಮತ್ತು 14 ನೇ ಪ್ರತಿವಾದಿಗಳ ಪರ ಶ್ರೀಮತಿ. ಡಿ.ಎಸ್.ಎಂ. ವಕೀಲರಿಂದಃ**

ನನಗೆ 23 ವರ್ಷ ಪ್ರಾಯವಾಗಿರುತ್ತದೆ. 1 ನೇ ಪ್ರತಿವಾದಿ ನನ್ನ ತಂದೆ, 2 ನೇ ಪ್ರತಿವಾದಿ ನನ್ನ ತಾಯಿ ಮತ್ತು 3 ನೇ ಪ್ರತಿವಾದಿ ನನ್ನ ಸಹೋದರ, 4 ನೇ ಪ್ರತಿವಾದಿ ನನಗೆ ದೊಡ್ಡಮ್ಮನಾಗಬೇಕು, 5 ರಿಂದ 8 ನೇ ಪ್ರತಿವಾದಿಗಳು ನನ್ನ ದೊಡ್ಡಮ್ಮನ ಮಕ್ಕಳು, 9, 10 ಮತ್ತು 12 ನೇ ಪ್ರತಿವಾದಿಗಳು ನನಗೆ ಅತ್ತೆಯಂದಿರಾಗಬೇಕು. 11 ನೇ ಪ್ರತಿವಾದಿ ನನಗೆ ದೊಡ್ಡಪ್ಪನಾಗಬೇಕು. 13 ನೇ ಪ್ರತಿವಾದಿ 9 ನೇ ಪ್ರತಿವಾದಿಗೆ ಸೊಸೆಯಾಗಬೇಕು. 14 ಮತ್ತು 15 ನೇ ಪ್ರತಿವಾದಿಗಳ ಜಮೀನನ್ನು ಖರೀದಿಸಿದವರಾಗಿರುತ್ತಾರೆ. ನನ್ನ ಮದುವೆ 2019 ರಲ್ಲಿ ಆಗಿರುತ್ತದೆ. ನನ್ನ ಕುಟುಂಬದವರ ಇಚ್ಚೆಗೆ ವಿರುದ್ಧವಾಗಿ ಪ್ರೇಮ ವಿವಾಹ ಮಾಡಿಕೊಂಡಿರುತ್ತೇನೆಂದರೆ ಸರಿ. ದಿನಾಂಕಃ 20.04.2019 ರಂದು ನನ್ನ ಮನೆಯವರು ವರನನ್ನು ನೋಡಿ ನಿಶ್ಚಿತಾರ್ಥ ಮಾಡಲು ದಿನಾಂಕ ನಿಗದಿ ಮಾಡಿದ್ದರು ಎಂದರೆ ಸರಿ. ಸದರಿ ದಿವಸದ ಹಿಂದಿನ ರಾತ್ರಿ ನಾನು ಮನೆ ಬಿಟ್ಟು ಹೋಗಿದ್ದೆ ಎಂದರೆ ಸರಿ. ನನ್ನ ಮನೆಯವರು ನನ್ನನ್ನು ಹುಡುಕಿ ನಂತರ ಪೋಲೀಸ್ ಠಾಣೆಗೆ ದೂರು ನೀಡಿದಾಗ ನಾನು ಬೇರೆ ಮದುವೆ ಮಾಡಿಕೊಂಡಿರುವ ವಿಷಯ ಗೊತ್ತಾಗಿರುತ್ತದೆಂದರೆ ಸರಿ. ಸದರಿ ದಿವಸದಿಂದಲೂ ನಾನು ನನ್ನ ತಂದೆ-ತಾಯಿಗಳನ್ನು ಹಾಗು ಕುಟುಂಬದವರನ್ನು ಹೋಗಿ ನೋಡಿರುವುದಿಲ್ಲ ಮತ್ತು ಅವರ ಜೊತೆ ಯಾವುದೇ ಸಂಬಂಧ ಇಟ್ಟುಕೊಂಡಿರುವುದಿಲ್ಲವೆಂದರೆ ಸರಿ. ನನ್ನ ತಂದೆಗೆ ಮಧ್ಯಪಾನ ಮಾಡುವ ಹವ್ಯಾಸವಿರುತ್ತದೆಂದರೆ ಸರಿ. ಇದರಿಂದ ನನ್ನ ತಂದೆ ಆಸ್ಪತ್ರೆಗೆ ಹೋಗುತ್ತಿರುತ್ತಾರೆಂದರೆ ಸರಿ. ನಾನು ದಿನಾಂಕಃ 19.04.2019 ರಂದು ನಾನು ಮನೆ ಬಿಟ್ಟು ಹೋಗಿದ್ದರಿಂದ ನನ್ನ ತಂದೆ

ಅನಾರೋಗ್ಯದಿಂದ ಆಸ್ಪತ್ರೆಗೆ ದಾಖಲಾಗಿದ್ದು, ಸುಮಾರು 20 ದಿವಸಗಳ ಕಾಲ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆಂದರೆ ನನಗೆ ಗೊತ್ತಿಲ್ಲ.

ಪ್ರತಿವಾದಿಗಳು ತಮ್ಮ ಪರವಾಗಿ ಲಿಖಿತ ಹೇಳಿಕೆ ಸಲ್ಲಿಸಿರುತ್ತಾರೆ. ಲಿಖಿತ ಹೇಳಿಕೆಯನ್ನು ಓದಿ ತಿಳಿದುಕೊಂಡಿರುತ್ತೇನೆ. ವಾದ ಪತ್ರದಲ್ಲಿ ನಮೂದಿಸಿರುವ 5 ನೇ ದಾವಾ ತಪಶೀಲು ಸ್ವತ್ತಿಗೆ ಸಂಬಂಧಿಸಿದಂತೆ ಸರಗೂರು ಪಟ್ಟಣದ ಸ.ನಂ. 24/2 ರಲ್ಲಿ 02 ಎಕರೆ 39 ಗುಂಟೆ ಎಂದು ನಮೂದಿಸಿದ್ದು, ಪಹಣಿ ಪತ್ರಿಕೆಯಲ್ಲಿ 01 ಎಕರೆ 39 ಗುಂಟೆ ಎಂದು ನಮೂದಾಗಿರುತ್ತದೆಂದರೆ ಸರಿ. ಸಾಕ್ಷಿಯು ಸ್ವತಃ ಮುಂದುವರಿದು ಭಾಗ ಕೊಡಬೇಕಾಗುತ್ತದೆಂಬ ಉದ್ದೇಶದಿಂದ ಅವರು ಭಾಗ ಮಾಡಿಕೊಂಡು 01 ಎಕರೆ 39 ಗುಂಟೆಯನ್ನು ತೋರಿಸಿರುತ್ತಾರೆ. ನಾನು ಹೇಳಿದಂತೆ ಆ ರೀತಿ ಯಾವುದೇ ಭಾಗವಾಗಿರುವುದಿಲ್ಲ ಮೊದಲಿನಿಂದಲೂ ಪಹಣಿ ಪತ್ರಿಕೆಯಲ್ಲಿ 01 ಎಕರೆ 39 ಗುಂಟೆ ಎಂದು ನಮೂದಿಸಿರುತ್ತಾರೆಂದರೆ ಸರಿ. ಪ್ರತಿವಾದಿಗಳು ಭಾಗ ಮಾಡಿಕೊಂಡಿರುತ್ತಾರೆಂದು ತೋರಿಸಲು ದಾಖಲೆ ಇರುತ್ತದೆ. ಸಾಕ್ಷಿಯು ತಾನು ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿ ಭಾಗವಾಗಿರುವ ಬಗ್ಗೆ ದಾಖಲೆ ಇರುವುದಿಲ್ಲವೆಂದು ನುಡಿಯುತ್ತಾರೆ. 5 ನೇ ದಾವಾ ತಪಶೀಲು ಸ್ವತ್ತಿನ ಪಹಣಿ ಪತ್ರಿಕೆ 11 ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ. ನಾನು ಹಾಜರುಪಡಿಸಿರುವ ನಿ.ಪಿ.-17 ರಲ್ಲಿ 5 ನೇ ದಾವಾ ತಪಶೀಲು ಸ್ವತ್ತಿನ ಪಹಣಿ ಪತ್ರಿಕೆ ನನ್ನ ಅಜ್ಜ ಸೋಮಶೆಟ್ಟಿಯವರ ಹೆಸರಿನಲ್ಲಿರುತ್ತದೆಂದರೆ ಸರಿ. ಸದರಿ ಸ್ವತ್ತಿನ ಪಹಣಿ ಪತ್ರಿಕೆ 11 ನೇ ಪ್ರತಿವಾದಿಯ ಹಸೆರಿನಲ್ಲಿರುತ್ತದೆಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲವೆಂದರೆ ಸರಿ. 2 ರಿಂದ 4 ನೇ ದಾವಾ ತಪಶೀಲು ಸ್ವತ್ತುಗಳ ಒಟ್ಟು ವಿಸ್ತೀರ್ಣ 06 ಎಕರೆ 10 ಗುಂಟೆ ಇತ್ತು ಎಂದರೆ ಸರಿ. ಅವುಗಳ ಮೂಲ ಸರ್ವೆ ನಂ. 109 ಆಗಿರುತ್ತದೆಂದರೆ ಸರಿ. ನನ್ನ ಅಜ್ಜ ಸೋಮಶೆಟ್ಟಿಯವರು ದಿನಾಂಕಃ 16.02.1983 ರಂದು ಈ ಮೇಲೆ ಹೇಳಿದ 06 ಎಕರೆ

10 ಗುಂಟೆ ಜಮೀನನ್ನು ಪುಟ್ಟವೀರಣ್ಣ ಮತ್ತು ಎ.ಪಿ. ಸಾವಿತ್ರಮ್ಮ ಎಂಬುವವರಿಂದ ಕ್ರಯಕ್ಕೆ ಪಡೆದಿರುತ್ತಾರೆಂದರೆ ಅವರು ಯಾರಿಂದ ಕ್ರಯಕ್ಕೆ ಪಡೆದಿರುತ್ತಾರೆಂದು ನನಗೆ ಗೊತ್ತಿಲ್ಲ ಆದರೆ ಕ್ರಯಕ್ಕೆ ಪಡೆದಿರುತ್ತಾರೆಂದು ಗೊತ್ತಿರುತ್ತದೆ. ನನ್ನ ಅಜ್ಜ ಮೃತಪಟ್ಟಿರುತ್ತಾರೆ. ನನ್ನ ಅಜ್ಜ ಮೃತಪಟ್ಟ ನಂತರ ಅವರ 03 ಜನ ಗಂಡು ಮಕ್ಕಳಾದ ನನ್ನ ತಂದೆ ವೆಂಕಟಶೆಟ್ಟಿ, ನನ್ನ ದೊಡ್ಡಪ್ಪಂದಿರಾದ ನರಸಶೆಟ್ಟಿ ಮತ್ತು ವೆಂಕಟೇಶ್ ರವರು ದಿನಾಂಕಃ 11.12.2006 ರಂದು ವಿಭಾಗ ಮಾಡಿಕೊಂಡಿರುತ್ತಾರೆಂದರೆ ಸರಿ. ಸದರಿ ವಿಭಾಗ ಪತ್ರಕ್ಕೆ 9, 10 ಮತ್ತು 12 ನೇ ಪ್ರತಿವಾದಿಗಳ ಸಮ್ಮತಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ನನ್ನ ದೊಡ್ಡಪ್ಪ ನರಸಶೆಟ್ಟಿ ನನ್ನ ಅಜ್ಜ ಮೃತಪಡುವ ಪೂರ್ವದಲ್ಲಿಯೇ ಮೃತಪಟ್ಟಿರುತ್ತಾರೆಂದರೆ ಅವರು ಯಾವಾಗ ಮೃತಪಟ್ಟಿರುತ್ತಾರೆಂದು ಗೊತ್ತಿಲ್ಲ ಆದರೆ ಮೃತಪಟ್ಟಿರುತ್ತಾರೆ. ಈ ಮೇಲೆ ಹೇಳಿದ ದಿನಾಂಕಃ 11.12.2006 ರ ವಿಭಾಗ ಪತ್ರದಂತೆ 11 ನೇ ಪ್ರತಿವಾದಿಯ ಭಾಗಕ್ಕೆ 02 ಎಕರೆ 10 ಗುಂಟೆ ಜಮೀನು ಬಂದಿರುತ್ತದೆಂದರೆ ಸರಿ. ಅದೇ ರೀತಿ 4 ರಿಂದ 8 ನೇ ಪ್ರತಿವಾದಿಗಳಿಗು ಕೂಡ 02 ಎಕರೆ ಜಮೀನು ಅವರ ಭಾಗಕ್ಕೆ ಬಂದಿರುತ್ತದೆಂದರೆ ಸರಿ. ಅದೇ ರೀತಿ ನನ್ನ ತಂದೆಗೂ ಕೂಡ 02 ಎಕರೆ ಜಮೀನು ಬಂದಿರುತ್ತದೆಂದರೆ ಸರಿ. 11 ನೇ ಪ್ರತಿವಾದಿಯ ಭಾಗಕ್ಕೆ ಬಂದ ನಂತರ ಅವರ ಭಾಗಕ್ಕೆ ಬಂದ 02 ಎಕರೆ 10 ಗುಂಟೆ ಜಮೀನಿನ ಸ.ನಂ. 109/1 ಆಗಿ ಪೋಡಿಯಾಗಿರುತ್ತದೆಂದರೆ ಸರಿ.

**ಈ ಹಂತದಲ್ಲಿ ಮಾನ್ಯ ಪ್ರತಿವಾದಿಗಳ ಪರ ವಕೀಲರು ಮುಂದಿನ ಪಾಟೀ ಸವಾಲಿಗಾಗಿ ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**